# Press Clipping


**Publication** : Prajavani

**Date** : Sep 2, 2016

**Edition** : State

**Page** : 1+ 3 Chandanavana






'ಸ್ಲಂ ಡಾಗ್ ಮಿಲೇನಿಯರ್' ಚಿತ್ರದಲ್ಲಿನ ಅದ್ಭುತ ಧ್ವನಿವಿನ್ಯಾಸಕ್ಕೆ ಆಸ್ಕರ್ ಪ್ರಶಸ್ತಿ ಪಡೆದ ರಸೂಲ್ ಪೂಕುಟ್ಟಿ 'ನಿರುತ್ತರ' ಸಿನಿಮಾದ ಮೂಲಕ ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ. ಮೊದಲ ಬಾರಿಗೆ ಕನ್ನಡ ಚಿತ್ರವೊಂದಕ್ಕೆ ಕೆಲಸ ಮಾಡಿರುವ ಪುಳಕದಲ್ಲಿರುವ ಅವರು 'ಚಂದನವನ' ಪುರವಣಿಗೆ ನೀಡಿದ ಸಂದರ್ಶನವಿದು.

# ಪೂಕುಟ್ಟಿಯ ಹೂಮಾತು

ಸಂದರ್ಶನ: ಓದೇಶ ಸಕಲೇಶಪುರ

**■ ಕನ್ನಡ ಸಿನಿಮಾದಲ್ಲಿ ಕೆಲಸ ಮಾಡಿದ ಅನುಭವ ಹೇಗಿತ್ತು?**

ನಾನು ದಕ್ಷಿಣ ಭಾರತದ ಚಿತ್ರಗಳನ್ನು ನೋಡಿ ಬೆಳೆದವನು, ಕಲಿತವನು. ಈ ಭಾಗದ ಭಾಷೆಗಳ ಬಗ್ಗೆ ಭಾವಾನಾತ್ಮಕ ಸಂಬಂಧವಿದೆ. 'ನಿರುತ್ತರ'ದ ಹಿಂದೆ ಯುವ ಮನಸ್ಸುಗಳಿವೆ. ಗಿರೀಶ ಕಾಸರವಳ್ಳಿ ಅವರಂತಹ ಹಿರಿಯರ ಮೇಲ್ವಿಚಾರಣೆಯೂ ಇದೆ. ಇದೊಂದು ಜರ್ನಿ ಸಿನಿಮಾ. ಬೆಂಗಳೂರಿನಿಂದ ಆರಂಭಗೊಂಡು ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶದವರೆಗೆ ಕಥೆ ಸಾಗುತ್ತದೆ. ಆಯಾ ಸ್ಥಳಗಳಲ್ಲಿನ ಸ್ಥಳೀಯತೆ ಎದ್ದು ಕಾಣುವಂತೆ, ಕಥೆಯ ಓಘಕ್ಕೆ ತಕ್ಕಂತೆ ಧ್ವನಿ ಜೋಡಿಸಿದ್ದೇನೆ. ಚಿತ್ರದಲ್ಲಿ ದೃಶ್ಯದಂತೆ ಧ್ವನಿಯೂ ಕಥೆ ಹೇಳುತ್ತದೆ. ಹೊಸ ತಂಡದ ಜತೆ ಮಾಡಿದ ಕೆಲಸ ಖುಷಿ ನೀಡಿದೆ.

**■ ಕನ್ನಡ ಚಿತ್ರರಂಗ-ಕರ್ನಾಟಕದ ಬಗ್ಗೆ ನಿಮ್ಮ ಅನಿಸಿಕೆ ಏನು?**

ಅತ್ಯುತ್ತಮ ಕಥೆಯ ಚಿತ್ರಗಳು ಬರುತ್ತಿರುವ ದೇಶದ ಕೆಲವೇ ಭಾಷೆಗಳ ಪೈಕಿ ಕನ್ನಡವೂ ಒಂದು. ಕಲಾತ್ಮಕ ಮತ್ತು ಪ್ರಯೋಗಾತ್ಮಕ ಚಿತ್ರಗಳಿಗಿಲ್ಲಿ ಬರವಿಲ್ಲ. ಇಲ್ಲಿರುವ ಸಮೃದ್ಧ ಸಾಹಿತ್ಯವೂ ಅದಕ್ಕೆ ಕಾರಣ.

ಮೂರನೇ ಪುಟಕ್ಕೆ...

# ಪೂಕುಟ್ಟಿಯ ಹೂಮಾತು

...ಒಂದನೇ ಪುಟದಿಂದ

ಇಲ್ಲಿನ ಪ್ರೇಕ್ಷಕರು ಬುದ್ಧಿವಂತರು. ಕೇವಲ ಕಮರ್ಷಿಯಲ್ ಅಥವಾ ಮಾಸ್ ಚಿತ್ರಗಳಿಗೆ ಅಂಟಿಕೊಂಡಿಲ್ಲ. ಭಿನ್ನ ಹಾಗೂ ಸದಭಿರುಚಿಯ ಚಿತ್ರಗಳನ್ನು ನೋಡಿ ಪ್ರೋತ್ಸಾಹಿಸುತ್ತಾರೆ. ತಮಿಳು, ತೆಲುಗು, ಮಲಯಾಳಂ, ಮರಾಠಿಗೂ ಇದು ಹೊರತಲ್ಲ. ಹಾಗಾಗಿ, ಭಾರತೀಯ ಸಿನಿಮಾ ಕ್ಷೇತ್ರದಲ್ಲಿ ದಕ್ಷಿಣ ಭಾರತೀಯ ಸಿನಿಮಾಗಳು ತಮ್ಮದೇ ಆದ ವಿಶೇಷತೆ ಹೊಂದಿವೆ.

ಕರ್ನಾಟಕದ ಬಗ್ಗೆ ಹೇಳುವುದಾದರೆ, ಆಗ್ನೇಯ ಏಷ್ಯಾದಲ್ಲೇ ಮೊದಲ ಬಾರಿಗೆ 'ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್' ಹುಟ್ಟುಹಾಕಿದ ಖ್ಯಾತಿ ಇಲ್ಲಿಯದ್ದು. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಸಿನಿಮಾ ಛಾಯಾಗ್ರಾಹಕ ವಿ.ಕೆ. ಮೂರ್ತಿ ಅಲ್ಲಿನ ವಿದ್ಯಾರ್ಥಿ. ಪಾಲಿಟೆಕ್ನಿಕ್ ಥರ ಶುರುವಾದ ಆ ಸಂಸ್ಥೆಯನ್ನು ಸರ್ಕಾರ 'ಫಿಲ್ಮ್ ಇನ್‌ಸ್ಟಿಟ್ಯೂಟ್' ಮಾಡಿತು. ಇತ್ತೀಚೆಗೆ ಸರ್ಕಾರ ಅದನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ಸೇರಿಸಿದ್ದನ್ನು ವಿರೋಧಿಸಿ ವಿದ್ಯಾರ್ಥಿಗಳು ಪ್ರತಿಭಟಿಸಿದ ವಿದ್ಯಾರ್ಥಿಗಳು, ಬೆಂಬಲ ಕೋರಿ ನನಗೆ ಪತ್ರವನ್ನು ಬರೆದಿದ್ದರು. ಕೆಲಸದ ಒತ್ತಡದಿಂದ ಬರಲಾಗಲಿಲ್ಲ. ಆದರೆ, ಅವರ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಸರ್ಕಾರಿ ಸಂಸ್ಥೆಗಳಿಂದ ಮಾತ್ರ ಒಳ್ಳೆಯ ಪ್ರತಿಭೆಗಳು ಬರಲು ಸಾಧ್ಯ ಎಂಬುದು ನನ್ನ ನಂಬಿಕೆ.

**■ ಬೇರೆ ಬೇರೆ ಭಾಷೆಗಳ ಚಿತ್ರಗಳಿಗೆ ಕೆಲಸ ಮಾಡುವಾಗ ಎದುರಿಸುವ ಸವಾಲುಗಳೇನು?**

ಸವಾಲುಗಳಿಗಿಂತ ಹೊಸತನವಿರುತ್ತದೆ. ಧ್ವನಿ ವಿನ್ಯಾಸಕಾರನಿಗೆ ಭಾಷೆ ಎಂದಿಗೂ ತಡೆಗೋಡೆ ಅಲ್ಲ. ನನ್ನ ಪ್ರಕಾರ ಭಾಷೆಯೂ ಒಂದು ಸೌಂಡ್.

**■ ಭಾರತೀಯ ಸಿನಿಮಾಗಳಲ್ಲಿ ಧ್ವನಿವಿನ್ಯಾಸಕ್ಕೆ ಆದ್ಯತೆ ಇದೆಯೇ?**

ಇತ್ತೀಚೆಗೆ ಭಾರತೀಯ ಭಾಷೆಯ ಚಿತ್ರಗಳಲ್ಲಿ ಧ್ವನಿವಿನ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಬದಲಾಗುತ್ತಿರುವ ಜನರ ಅಭಿರುಚಿಗೆ ತಕ್ಕಂತೆ ಇಲ್ಲಿನ ನಿರ್ದೇಶಕರು ಯಾವುದರಲ್ಲೂ ರಾಜಿಯಾಗದೆ ಚಿತ್ರವನ್ನು ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ.

**■ ಈ ಕ್ಷೇತ್ರ ನಿಮ್ಮ ಆಯ್ಕೆಯೋ, ಆಕಸ್ಮಿಕವೋ?**

ಈ ಕ್ಷೇತ್ರಕ್ಕೆ ಆಕಸ್ಮಿಕವಾಗಿ ಬಂದೆ. ಭೌತವಿಜ್ಞಾನಿ ಆಗಬೇಕೆಂದುಕೊಂಡಿದ್ದೆ. ಆದರೆ, ಪ್ರವೇಶ ಸಿಗಲಿಲ್ಲ. ಪದವಿ ನಂತರ ಎಲ್.ಎಲ್.ಬಿ.ಗೆ ಸೇರಿದರೂ ಅಷ್ಟಾಗಿ ಆಸಕ್ತಿ ತೋರಲಿಲ್ಲ. ಆ ಕೋರ್ಸನ್ನು ಅರ್ಧಕ್ಕೇ ನಿಲ್ಲಿಸಿ ಸಿನಿಮಾದತ್ತ ವಾಲಿದೆ. 'ಫಿಲ್ಮ್ ಇನ್‌ಸ್ಟಿಟ್ಯೂಟ್'ಗೆ ಸೇರಲು ಯತ್ನಿಸಿದೆ. ಪ್ರವೇಶ ಗಿಟ್ಟಲಿಲ್ಲ. ಕಡೆಗೆ ಧ್ವನಿ ವಿನ್ಯಾಸ ಕ್ಷೇತ್ರವನ್ನು ಆಯ್ದುಕೊಂಡೆ. ತಂದೆಯ ಆಸೆ ಈಡೇರಿಸುವುದಕ್ಕಾಗಿ ಮೂರು ವರ್ಷದ ಹಿಂದೆಯಷ್ಟೆ ಎಲ್.ಎಲ್.ಬಿ ಪೂರ್ಣಗೊಳಿಸಿದೆ. ವಕೀಲನಾಗಿ ನೋಂದಣಿ ಮಾಡಿಸಿದ್ದೇನೆ. ಆದರೆ, ಪ್ರಾಕ್ಟಿಸ್ ಮಾಡುತ್ತಿಲ್ಲ.

**■ ಧ್ವನಿವಿನ್ಯಾಸ ಕಲಿಸುವ ಸಂಸ್ಥೆಯೊಂದನ್ನು ತೆರೆಯುವ ಉದ್ದೇಶ ಇದೆಯೇ?**

ದೇಶದಲ್ಲಿ ಧ್ವನಿವಿನ್ಯಾಸ ಕಲಿಸುವ ಹಲವು ಸಂಸ್ಥೆಗಳಿವೆ. ಲಕ್ಷಾಂತರ ರೂಪಾಯಿ ಶುಲ್ಕ ಪಾವತಿಸಿ ಅಲ್ಲಿ ಕಲಿತುಬಂದವರಿಗೆ ಏನೂ ಗೊತ್ತಿರುವುದಿಲ್ಲ. ಅದನ್ನು ನೋಡಿದರೆ ಬೇಸರವಾಗುತ್ತದೆ. ನಾನೇ ಯಾಕೆ ಒಂದು ಸಂಸ್ಥೆ ಆರಂಭಿಸಬಾರದು ಅನಿಸುತ್ತದೆ. ಆದರೆ, ಸದ್ಯಕ್ಕೆ ಕೆಲಸ ಬಿಟ್ಟು ಅದನ್ನು ಮಾಡಲು ಸಾಧ್ಯವಾಗದು. ಅದಕ್ಕಿನ್ನೂ ಸಮಯವಿದೆ.

**■ ಧ್ವನಿವಿನ್ಯಾಸಕರಾಗಲು ಬಯಸುವವವರಿಗೆ ನಿಮ್ಮ ಕಿವಿಮಾತೇನು?**

ಕೇಳಿಸಿಕೊಳ್ಳುವಿಕೆ ಮತ್ತು ಗ್ರಹಿಕೆಯ ಮಧ್ಯೆ ವ್ಯತ್ಯಾಸ ಮೊದಲಿಗೆ ಗೊತ್ತಿರಬೇಕು. ಶಬ್ದದ ಹಿಂದಿರುವ ರಿದಂ ಅರಿಯುವ ಸಾಮರ್ಥ್ಯವಿರಬೇಕು. ಪ್ರೇಕ್ಷಕನಿಗೆ ಯಾವ ಸಂದರ್ಭದಲ್ಲಿ ಏನನ್ನು, ಎಷ್ಟು ಕೊಡಬೇಕು ಎಂಬುದು ತಿಳಿದಿರಬೇಕು. ಇವಿಷ್ಟು ಈ ಕ್ಷೇತ್ರಕ್ಕೆ ಬೇಕಾದ ಪ್ರಾಥಮಿಕ ಅರ್ಹತೆಗಳು.

❖

## ಕಥೆ- ಸಂಗೀತದ ಜುಗಲಬಂದಿ

ನಿರೀಕ್ಷೆ ಮೂಡಿಸಿರುವ 'ನಿರುತ್ತರ' ಸಿನಿಮಾ ಕಡೆಗೂ ಬಿಡುಗಡೆಗೆ ಸಿದ್ಧವಾಗಿದೆ. ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಪುತ್ರ ಅಪೂರ್ವ ಕಾಸರವಳ್ಳಿ ನಿರ್ದೇಶನದ ಮೊದಲ ಚಿತ್ರವಿದು.

'ಅನಿವಾರ್ಯ ಕಾರಣಗಳಿಂದಾಗಿ ಚಿತ್ರ ಬಿಡುಗಡೆ ಹಂತಕ್ಕೆ ಬರಲು ವಿಳಂಬವಾಯಿತು. ಸಂಬಂಧಗಳ ಸುತ್ತ ಹೆಣೆಯಲಾಗಿರುವ ಜೀವನಯಾನ ಈ ಚಿತ್ರದ ಕಥೆ. ಕರ್ನಾಟಕದಿಂದ ಆರಂಭಗೊಂಡು ರಾಜಸ್ಥಾನ, ಹಿಮಾಚಲ ಪ್ರದೇಶದವರೆಗೆ ಕಥೆ ಸಾಗುತ್ತದೆ. ಇಲ್ಲಿ ಸಂಗೀತಕ್ಕೂ ಕಥೆಯಷ್ಟೆ ಮಹತ್ವವಿದೆ' ಎಂದು ಅಪೂರ್ವ ಹೇಳಿದರು.

'ಪುತ್ರನ ಚೊಚ್ಚಲ ನಿರ್ದೇಶನದ ಚಿತ್ರವನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ ಎಂಬ ಕುತೂಹಲವಿದೆ' ಎಂದ ಗಿರೀಶ್ ಕಾಸರವಳ್ಳಿ, 'ಕಥೆ ಸಾಗುವ ಸ್ಥಳಗಳಲ್ಲಿನ ಸ್ಥಳೀಯತೆ ಪ್ರತಿ ದೃಶ್ಯದಲ್ಲೂ ಎದ್ದು ಕಾಣುತ್ತದೆಯಲ್ಲದೆ, ಸಂಗೀತ ಅದಕ್ಕೆ ಜೀವ ತುಂಬಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಹುಲ್ ಬೋಸ್, ಭಾವನಾ, ಕಿರಣ್ ಶ್ರೀನಿವಾಸ್ ಮತ್ತು ಐಂದ್ರಿತಾ ರೇ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರಕ್ಕೆ, ವಿಕ್ರಮ್ ಹತ್ವಾರ್ ಅವರು ಕಥೆ ಬರೆದಿದ್ದು, ನೀಲಾದ್ರಿ ಕುಮಾರ್ ಸಂಗೀತ ಸಂಯೋಜನೆ ಹಾಗೂ ಎಚ್.ಎನ್. ರಾಮಚಂದ್ರ ಛಾಯಾಗ್ರಹಣವಿದೆ. ಅಕ್ಟೋಬರ್ ತಿಂಗಳ ಮೊದಲ ವಾರ ಬಿಡುಗಡೆಯಾಗಲಿದೆ.